


بسم اللهِ الرّحمٰن الرّحيم

# ವಕ್ಫ್ ಜದೀದ್ – 2025

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **03–01–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಸೂರಃ ಆಲಿ ಇಮ್ರಾನ್ 93ನೇ ವಚನ ಪಠಿಸಿದ ನಂತರ ಅದರ ಅರ್ಥ ವಿವರಿಸುತ್ತಾ ಹೀಗೆ ಹೇಳಿದರು:)*

ನಿಮಗೆ ಪ್ರಿಯವಾದವುಗಳಿಂದ (ದೇವ ಮಾರ್ಗದಲ್ಲಿ) ವ್ಯಯಿಸುವ ವರೆಗೆ ನೀವು (ಪರಿಪೂರ್ಣ) ಒಳಿತನ್ನು ಗಳಿಸಲಾರಿರಿ. ನೀವು ಖರ್ಚು ಮಾಡುವುದನ್ನೆಲ್ಲ ಅಲ್ಲಾಹನು ಚೆನ್ನಾಗಿ ಬಲ್ಲನು.

(ಅನಂತರ ಹುಝೂರ್ ಹೇಳಿದರು:) ಅಲ್ಲಾಹನ ಮಾರ್ಗವನ್ನು ಹುಡುಕುವ ಒಬ್ಬ ಯಥಾರ್ಥ ಸತ್ಯವಿಶ್ವಾಸಿಯು ಅಲ್ಲಾಹನ ಸಾಮೀಪ್ಯವನ್ನು ಗಳಿಸಲಿಕ್ಕೆ ಬೇಕಾಗಿರುವ ಮಾರ್ಗಗಳನ್ನು ಹುಡುಕುತ್ತಾ ಇರಬೇಕು. ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ಖರ್ಚು ಮಾಡುವುದನ್ನು ಸಹ ಅಲ್ಲಾಹನು ಒಂದು ಸತ್ಕರ್ಮವಾಗಿ ಹೇಳಿರುವನು. ನೀವು ಪ್ರೀತಿಸುವ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದಾದರೆ ಅದು ಮಹತ್ತಾದ ಸತ್ಕರ್ಮವಾಗಿದೆ ಎಂಬುವುದನ್ನು ಈ ವಚನದಲ್ಲೂ ಪ್ರಸ್ತಾಪಿಸಲಾಗಿದೆ. ನಿಸ್ಸಂದೇಹವಾಗಿಯೂ ಅಲ್ಲಾಹನು ಎಲ್ಲ ಒಳಿತಿಗೂ ಪ್ರತಿಫಲವನ್ನು ನೀಡುತ್ತಾನೆ. ಆದರೆ ಮನುಷ್ಯನಿಗೆ ಸಂಪತ್ತಿನೊಡನೆ ಪ್ರೀತಿ ಇರುತ್ತದೆ. ಆದ್ದರಿಂದ ಈ ಕುರಿತು ವಿಶೇಷ ಗಮನ ಸೆಳೆಯಲಾಗಿದೆ.

ಈ ವಚನದ ಕುರಿತು ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಸಂಪತ್ತಿನೊಂದಿಗೆ ಪ್ರೀತಿ ಇರಬಾರದು. ನೀವು ಪ್ರೀತಿಸುವ ವಸ್ತುಗಳನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ತನಕ ನೀವು ಖಂಡಿತವಾಗಿಯೂ ಒಳಿತನ್ನು ಗಳಿಸಲಾರಿರಿ ಎಂದು ಅಲ್ಲಾಹನು ಹೇಳುತ್ತಾನೆ. ಈ ಕಾಲವನ್ನು ಹಝ್ರತ್ ಪೈಗಂಬರ್[ಸ]ರ ಕಾಲದೊಂದಿಗೆ ಹೋಲಿಸುವುದಾದರೆ ಆಶ್ಚರ್ಯವಾಗುತ್ತದೆ. ಏಕೆಂದರೆ, ಜೀವಕ್ಕಿಂತ ಪ್ರಿಯವಾದ ಬೇರೆ ವಸ್ತುವಿಲ್ಲ. ಆದರೂ ಆ ಕಾಲದಲ್ಲಿ ಜೀವತ್ಯಾಗವನ್ನೇ ಮಾಡಬೇಕಾಗುತ್ತಿತ್ತು. ನಿಮ್ಮ ಹಾಗೆಯೇ ಅವರಿಗೂ ಮಡದಿ ಮಕ್ಕಳು ಇದ್ದರು. ಜೀವ ಎಲ್ಲರಿಗೂ ಪ್ರಿಯವಾಗಿರುತ್ತದೆ. ಆದರೆ ಅವಕಾಶ ಲಭಿಸಿದರೆ ಅಲ್ಲಾಹನ ಮಾರ್ಗದಲ್ಲಿ ಜೀವದ ಬಲಿದಾನ ಮಾಡಲು ಅವರು ಯಾವಾಗಲೂ ಆಶಿಸುತ್ತಿದ್ದರು. ವ್ಯರ್ಥ ಹಾಗೂ ನಿರುಪಯುಕ್ತ ವಸ್ತುಗಳನ್ನು ಖರ್ಚು ಮಾಡುವುದರಿಂದ ಮನುಷ್ಯನು ಸತ್ಕರ್ಮ ಮಾಡಿದ್ದಾಗಿ ವಾದಿಸಲು ಸಾಧ್ಯವಲ್ಲ. ಸತ್ಕರ್ಮದ ಬಾಗಿಲು ಇಕ್ಕಟ್ಟಾಗಿರುತ್ತದೆ. ನಿರುಪಯುಕ್ತ ವಸ್ತುಗಳನ್ನು ಖರ್ಚು ಮಾಡುವುದರಿಂದ ಯಾವನೇ ವ್ಯಕ್ತಿ ಅದನ್ನು ಪ್ರವೇಶಿಸಲು ಸಾಧ್ಯವಲ್ಲ ಎಂಬುದನ್ನು ನೆನಪಿನಲ್ಲಿಡಬೇಕು. ಏಕೆಂದರೆ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೀಗೆ ಹೇಳುತ್ತದೆ: **ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್**. ಎಂದರೆ, ಅತ್ಯಂತ ಪ್ರಿಯ ವಸ್ತುಗಳನ್ನು ಖರ್ಚು ಮಾಡುವ ತನಕ ಅಲ್ಲಾಹನ ಪ್ರಿಯ ಮತ್ತು ಮಿತ್ರನೆಂಬ ಪದವಿ ಲಭಿಸಲಾರದು. ಶ್ರೇಷ್ಠ ಸಹಾಬಿಯರು ಸುಮ್ಮನೆ ಆ ಪದವಿಯನ್ನು ತಲುಪಿದ್ದರೇ? ಲೌಕಿಕ ಬಿರುದುಗಳನ್ನು ಗಳಿಸಲಿಕ್ಕಾಗಿಯೂ ಎಷ್ಟೆಲ್ಲ ಖರ್ಚುಗಳನ್ನು ಮತ್ತು ಕಷ್ಟಗಳನ್ನು ಸಹಿಸಬೇಕಾಗಿ ಬರುತ್ತವೆ. ಅಷ್ಟಾದರೂ ನೆಮ್ಮದಿ ಮತ್ತು ಮನಸ್ಸಮಾಧಾನ ಸಿಗದಂತಹ ಒಂದು ಮಾಮೂಲಿ ಬಿರುದು ಲಭಿಸುತ್ತದೆ. ಹೀಗಿರುವಾಗ ಮನಸ್ಸಿಗೆ ನೆಮ್ಮದಿ ಮತ್ತು ಹೃದಯಕ್ಕೆ ಸಮಾಧಾನ ಹಾಗೂ ಕೃಪಾಳು ಪ್ರಭುವಿನ ಸಂಪ್ರೀತಿಯ ಕುರುಹು ಆಗಿರುವ **ರಝಿಯಲ್ಲಾಹು ಅನ್‌ಹುಮ್** (ಅಲ್ಲಾಹನು ಅವರಲ್ಲಿ ಸಂಪ್ರೀತಗೊಂಡರು) ಎಂಬ ಬಿರುದು ಸಹಾಬಿಯರಿಗೆ ಸುಲಭವಾಗಿ ಲಭಿಸಿರಬಹುದೇ ಎಂದು ಯೋಚಿಸಿರಿ. ಅಲ್ಲಾಹನನ್ನು ಮೋಸ ಮಾಡಲು ಸಾಧ್ಯವಲ್ಲ. ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಕಷ್ಟಗಳನ್ನು ಪರಿವೆ ಮಾಡದವರು ಅನುಗ್ರಹೀತರು. ಏಕೆಂದರೆ ಸತ್ಯವಿಶ್ವಾಸಿಗೆ ಅನಂತ ಸಂತೋಷ ಮತ್ತು ಸ್ಥಾಯಿಯಾದ ಆರಾಮದ ಪ್ರಕಾಶ ಈ ತಾತ್ಕಾಲಿಕ ಕಷ್ಟದ ನಂತರ ಲಭಿಸುತ್ತದೆ. ಲೋಕದಲ್ಲಿ ಮನುಷ್ಯನು ಸಂಪತ್ತನ್ನು ಬಹಳಷ್ಟು ಪ್ರೀತಿಸುತ್ತಾನೆ. ಆದ್ದರಿಂದಲೇ ಯಕೃತ್ತನ್ನು ಹೊರಗೆ ತೆಗೆದು ಯಾರಿಗಾದರೂ ನೀಡಿದ್ದಾಗಿ ಕನಸಿನಲ್ಲಿ ಕಾಣುವುದರ ಅರ್ಥ ಸಂಪತ್ತಾಗಿದೆ ಎಂದು **ಇಲ್ಮೇ ತಅ್‌ಬೀರುರ್ರುಅ್‌ಯಾ**ದಲ್ಲಿ ಬರೆಯಲಾಗಿದೆ.

ಯಥಾರ್ಥ ಸತ್ಕರ್ಮವನ್ನು ಗಳಿಸಲಿಕ್ಕಾಗಿ ಅತ್ಯಂತ ಪ್ರಿಯವಾದ ಸಂಪತ್ತನ್ನು ಖರ್ಚು ಮಾಡಬೇಕು ಎಂಬ ರಹಸ್ಯವನ್ನು ಇಂದು ಅಹ್ಮದಿಯಾ ಜಮಾಅತಿನ ವ್ಯಕ್ತಿಗಳು ಸರಿಯಾಗಿ ಮನವರಿಕೆ ಮಾಡಿರುವರು. ಹಝ್ರತ್ ಪೈಗಂಬರ್[ಸ]ರ ಸಹಾಬಿಯರು ಸ್ಥಾಪಿಸಿದ, ಅನಂತರ ಹಝ್ರತ್ ಮಸೀಹ್ ಮೌಊದ್[ಅ]ರ ಕಾಲದಲ್ಲಿ ಅವರ ಸಹಾಬಿಯರು ಸ್ಥಾಪಿಸಿದ ತ್ಯಾಗದ ಮಟ್ಟವನ್ನು ಇಂದು ಸಹ ನಾವು ನೋಡುತ್ತಿದ್ದೇವೆ. ಇದು ಖಂಡಿತವಾಗಿಯೂ ಹಝ್ರತ್ ಮಸೀಹ್ ಮೌಊದ್[ಅ]ರ ತರಬೇತಿಯ ಪ್ರಭಾವವಾಗಿದೆ. ಅನಂತರ ಖಿಲಾಫತಿನ ಪ್ರತಿಯೊಂದು ಕಾಲಘಟ್ಟದಲ್ಲಿ ಈ ತ್ಯಾಗವನ್ನು ನಾವು ನೋಡುತ್ತಾ ಬಂದಿದ್ದೇವೆ. ಇಂದಿನ ತನಕ ಇದೇ ತ್ಯಾಗಗಳನ್ನು ನಾವು ಕಾಣುತ್ತಿದ್ದೇವೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಜಿಪುಣತೆ ಮತ್ತು ಸತ್ಯವಿಶ್ವಾಸ ಒಂದು ಹೃದಯದಲ್ಲಿ ಒಟ್ಟುಗೂಡಲು

ಸಾಧ್ಯವಲ್ಲ ಎಂದು ಚೆನ್ನಾಗಿ ತಿಳಿದುಕೊಳ್ಳಿರಿ. ಸಮುದಾಯದವರು ಎಲ್ಲ ರೀತಿಯಲ್ಲೂ ಈ ಜಮಾಅತಿನ ಸೇವೆ ಮಾಡಬೇಕು. ಆರ್ಥಿಕವಾಗಿಯೂ ಸೇವೆ ಮಾಡುವುದರಲ್ಲಿ ಕೊರತೆ ಉಂಟಾಗಬಾರದು. ನೋಡಿರಿ, ಲೋಕದಲ್ಲಿ ಯಾವುದೇ ಜಮಾಅತ್ ದೇಣಿಗೆಯಿಲ್ಲದೇ ನಡೆಯಲಾರದು. ಎಲ್ಲ ಪ್ರವಾದಿಗಳ ಸಮಯದಲ್ಲೂ ದೇಣಿಗೆಗಳನ್ನು ಪಡೆಯಲಾಗುತ್ತಿತ್ತು. ಆದ್ದರಿಂದ ನಮ್ಮ ಜಮಾಅತಿನ ಜನರು ಈ ವಿಷಯದ ಬಗ್ಗೆ ಯೋಚಿಸಬೇಕು. ಈ ಜನರು ಕ್ರಮಬದ್ಧವಾಗಿ ಒಂದೊಂದು ಪೈಸೆ ಪೂರ್ತಿ ವರ್ಷದಲ್ಲಿ ನೀಡುವುದಾದರೂ ಸಾಕಷ್ಟು ಆಗಬಹುದಾಗಿದೆ.

(ಈ ಸಂಬಂಧವಾಗಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ)ರ ತ್ಯಾಗಗಳ ಕುರಿತು ಹಝ್ರತ್ ಮಸೀಹ್ ಮೌಊದ್(ಅ)ರ ಕೆಲವು ಹೇಳಿಕೆಗಳನ್ನು ಹುಝೂರ್ ಮುಂದಿರಿಸಿದರು.) ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ರ)ರಿಗೆ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹೀಗೆ ಪತ್ರ ಬರೆದರು: ಹೇ ನನ್ನ ಗುರು ಮತ್ತು ಮಾರ್ಗದರ್ಶಕ, ನನ್ನ ಸಕಲ ಹಣ ಮತ್ತು ಸಂಪತ್ತು ಧರ್ಮ ಪ್ರಚಾರಕ್ಕಾಗಿ ಖರ್ಚಾದರೆ ನಾನು ನನ್ನ ಉದ್ದೇಶವನ್ನು ಸಾಧಿಸಿದೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ವಖ್ಫ್ ಜದೀದ್ ಮತ್ತು ತಹ್ರೀಕ್ ಜದೀದಿನ ಯೋಜನೆಗಳನ್ನು ಆರಂಭಿಸಿದಾಗ ಕೆಲವು ಅತ್ಯಂತ ಬಡ ಜನರು ಅಲ್ಪ ಸ್ವಲ್ಪ ಹಣವನ್ನು ನೀಡಿದರು. ನಮ್ಮ ಬಳಿ ಏನಿದೆಯೋ ಅದನ್ನು ನೀಡುತ್ತಿದ್ದೇವೆ ಎಂದು ಹೇಳಿಕೊಂಡು ಕೆಲವರು ಕೋಳಿಗಳನ್ನು ಮತ್ತು ಕೆಲವರು ಮೊಟ್ಟೆಗಳನ್ನು ತೆಗೆದುಕೊಂಡು ಬಂದರು. (ಈ ಸಂಬಂಧವಾಗಿ ಹುಝೂರ್ ಹಝ್ರತ್ ಖಲೀಫ ರಶೀದುದ್ದೀನ್ ಸಾಹಿಬ್(ರ)ರ ಧನತ್ಯಾಗಗಳ ವಿವರ ಹಾಗೂ ಸಹಾಬಿಯರು ಮತ್ತು ಹಿರಿಯರ ಕೆಲವು ವರದಿಗಳನ್ನು ಮುಂದಿರಿಸಿದ ನಂತರ ಹುಝೂರ್ ಹೀಗೆ ಹೇಳಿದರು:) ಇಂದು ಕೂಡ ನಮಗೆ ಇಂತಹ ಉದಾಹರಣೆಗಳನ್ನು ಹಲವೆಡೆ ಕಾಣಬಹುದಾಗಿದೆ. ಈ ಸ್ಫೂರ್ತಿ ಇಂದು ಕೂಡ ಅಹ್ಮದಿಯರಲ್ಲಿ ನಾವು ಕಾಣುತ್ತಿದ್ದೇವೆ. (ಅನಂತರ ಹುಝೂರ್ ಮಾರ್ಶಲ್ ಐಲೇಂಡ್, ಖಝಕಿಸ್ತಾನ, ಕೇಮರೂನ್, ನೈಜರ್, ಗೇಂಬಿಯಾ, ತನ್ಝಾನಿಯ, ಚೆಕ್ ರಿಪಬ್ಲಿಕ್ ಇತ್ಯಾದಿ ದೇಶಗಳ ಕೆಲವು ನಿಷ್ಠೆಯ ಮತ್ತು ತ್ಯಾಗದ ಘಟನೆಗಳನ್ನು ಮುಂದಿರಿಸಿದರು.)

(ಹುಝೂರ್ ಹೇಳಿದರು:) ಇಂಡಿಯಾದ ಒಬ್ಬರು ಇನ್ಸ್‌ಪೆಕ್ಟರ್ ಸಾಹಿಬ್ ಬರೆಯುತ್ತಾರೆ: ಒಬ್ಬ ಸಹೋದರನ ವಖ್ಫೇ ಜದೀದಿನ ಚಂದಾ 24 ಸಾವಿರ ಆಗಿತ್ತು. ವಖ್ಫೇ ಜದೀದಿನ ವರ್ಷ ಮುಕ್ತಾಯಗೊಳ್ಳಲು ಕೆಲವೇ ದಿನಗಳು ಉಳಿದಿದ್ದುವು. ಅವರ ಬಳಿಯಿದ್ದ ಹಣ ಒಂದು ಮುಖ್ಯವಾದ ಕೆಲಸಕ್ಕೆ ಕೊಡಬೇಕಾಗಿತ್ತು. ಅವರು ಅಲ್ಲಾಹನ ಮೇಲೆ ಭರವಸೆ ಇಡುತ್ತಾ ಆ ಹಣವನ್ನು ಚಂದಾ ಪಾವತಿ ಮಾಡಲು ಕೊಟ್ಟರು. ಮರುದಿನವೇ ವ್ಯಾಪಾರದಲ್ಲಿ ಸಿಲುಕಿಕೊಂಡಿದ್ದ ಒಂದು ಹಿರಿದಾದ ಮೊತ್ತ ದಿಢೀರನೇ ಅವರಿಗೆ ಲಭಿಸಿತು. ನೋಡಿರಿ, ನೀನು ನನಗಾಗಿ ಹಣದ ಪ್ರೀತಿಯನ್ನು ಬಿಡುತ್ತಿದ್ದೀಯಾ ಮತ್ತು ಸ್ವಂತ ಅಗತ್ಯಗಳನ್ನು ಬಿಟ್ಟು ಜಮಾಅತಿನ ಅಗತ್ಯಗಳನ್ನು ಈಡೇರಿಸಲು ಪ್ರಯತ್ನಿಸುತ್ತಿದ್ದೀಯಾ, ಆದ್ದರಿಂದ ನಾನು ನಿನ್ನ ಸಹಾಯವನ್ನು ಮಾಡುತ್ತೇನೆ ಎಂದು ಅಲ್ಲಾಹನು ಅವರಿಗೆ ತಿಳಿಸಿಕೊಟ್ಟನು. ಈ ರೀತಿಯಾಗಿ ಅಲ್ಲಾಹನು ಸಹಾಯ ಮಾಡುತ್ತಾನೆ. ಜಮಾಅತಿನಲ್ಲಿ ನಡೆಯುತ್ತಿರುವ ಎಲ್ಲ ಖರ್ಚುಗಳು ಮತ್ತು ಲೋಕದೆಲ್ಲಡೆ ಇರುವ ಮಿಶನ್‌ಗಳು ಮರ್ಕಝಿಗೆ ತಲುಪುವ ತಹ್ರೀಕ್ ಜದೀದ್ ಮತ್ತು ವಖ್ಫೇ ಜದೀದ್ ಚಂದಾಗಳಿಂದಲೇ ನಡೆಯುತ್ತಿವೆ. ಉಳಿದ ಹಣ ಪ್ರಾದೇಶಿಕ ದೇಶಗಳಲ್ಲೇ ಖರ್ಚಾಗುತ್ತದೆ. ಈ ಎಲ್ಲ ಖರ್ಚುಗಳು ಅದೇ ಚಂದಾಗಳಿಂದಲೇ ಆಗುತ್ತವೆ. ಬಡತನವಿರುವ ಆಫ್ರಿಕ ದೇಶಗಳ ಜನರು ಚಂದಾಗಳನ್ನು ನೀಡುತ್ತಾರಾದರೂ ಬಡತನದ ಕಾರಣದಿಂದ ಅಲ್ಲಿ ಮಸೀದಿಗಳನ್ನು ಮಿಶನ್‌ಗಳನ್ನು ನಡೆಸಲು ಹಣದ ಅಗತ್ಯವಿರುತ್ತದೆ. ಆಫ್ರಿಕದಲ್ಲಿ ಈಗ 7953 ಮಸೀದಿಗಳ ನಿರ್ಮಾಣವಾಗಿವೆ ಮತ್ತು 306 ಮಸೀದಿಗಳನ್ನು ನಿರ್ಮಿಸಲಾಗುತ್ತಿವೆ. 1860 ಮಿಶನ್ ಹೌಸ್‌ಗಳು ಕೆಲಸ ಮಾಡುತ್ತಿವೆ. 400 ಕೇಂದ್ರೀಯ ಮುಬಲ್ಲಿಗರು ಮತ್ತು ಎರಡು ಸಾವಿರಕ್ಕಿಂತಲೂ ಹೆಚ್ಚು ಮುಅಲ್ಲಿಮರು ಕೆಲಸ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ಖಾದಿಯಾನ್, ಸೌತ್ ಅಮೇರಿಕ, ಅಲ್‌ಜೀರಿಯ ಮುಂತಾದ ದೇಶಗಳಲ್ಲಿ ಹಣದ ಖರ್ಚಾಗುತ್ತದೆ. ಸಾಹಿತ್ಯ ಪ್ರಕಾಶನ ಮತ್ತು ವಿತರಣೆಯ ಖರ್ಚುಗಳಿವೆ. ಈ ಎಲ್ಲ ಖರ್ಚುಗಳನ್ನು ಅಲ್ಲಾಹನು ತನ್ನ ಕೃಪೆಯಿಂದ ಈಡೇರಿಸುತ್ತಿದ್ದಾನೆ.

ಧನವನ್ನು ನಾನು ನಿನಗೆ ನೀಡುವೆನು ಎಂದು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಹೇಳಿದ್ದನು. ಆ ವಾಗ್ದಾನದ ಪ್ರಕಾರ ಧನವನ್ನು ನೀಡುತ್ತಿದ್ದಾನೆ. ಅದನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಲು ಅಲ್ಲಾಹನು ಜಮಾಅತಿಗೆ ಸೌಭಾಗ್ಯ ನೀಡಲಿ. ಅದರಲ್ಲಿ ಯಾವುದೇ ಅಸ್ತವ್ಯಸ್ತತೆ ನಡೆಯದಿರಲಿ. (ವಖ್ಫೇ ಜದೀದಿನ ಕಳೆದ ವರ್ಷದ ರಿಪೋರ್ಟಿಗೆ ಸಂಬಂಧಿಸಿ ಹುಝೂರ್ ಹೀಗೆ ಹೇಳಿದರು:) ಅಲ್ಲಾಹನ ಅನುಗ್ರಹದಿಂದ ವಖ್ಫೇ ಜದೀದಿನ 67ನೇ ವರ್ಷ ಕೊನೆಗೊಂಡಿದೆ. ಈ ವರ್ಷ ಜಾಗತಿಕ ಅಹ್ಮದಿಯಾ ಜಮಾಅತಿಗೆ ಅಲ್ಲಾಹನ ಸನ್ನಿಧಿಯಲ್ಲಿ ಒಂದು ಕೋಟಿ 36 ಲಕ್ಷ 81 ಸಾವಿರ ಪೌಂಡ್ ಎಂದರೆ ಸುಮಾರು 14 ಮಿಲಿಯನಿನ ಧನತ್ಯಾಗವನ್ನು ಮಾಡಲು ಸೌಭಾಗ್ಯ ಲಭಿಸಿತು ಈ ವಸೂಲಿ ಕಳೆದ ವರ್ಷಕ್ಕಿಂತ 7 ಲಕ್ಷ 36 ಸಾವಿರ ಪೌಂಡ್ ಹೆಚ್ಚಾಗಿದೆ. ವಖ್ಫೇ ಜದೀದಿನಲ್ಲಿ ಸೇರ್ಪಡೆಗೊಂಡವರ ಸಂಖ್ಯೆ 15 ಲಕ್ಷ 51 ಸಾವಿರ ಆಗಿದೆ. ಅಲ್‌ಹಮ್ದುಲಿಲ್ಲಾಹ್.

ವಸೂಲಿಯ ಪ್ರಕಾರ ಮೊದಲ ಹತ್ತು ರಾಷ್ಟ್ರಗಳು ಅನುಕ್ರಮವಾಗಿ ಹೀಗಿವೆ: ಬ್ರಿಟನ್, ಕೆನಡ, ಜರ್ಮನಿ, ಅಮೇರಿಕ, ಭಾರತ, ಆಸ್ಟ್ರೇಲಿಯಾ, ಮಿಡಲ್ ಈಸ್ಟಿನ ಒಂದು ಜಮಾಅತ್, ಇಂಡೋನೇಶ್ಯ, ಮಿಡಲ್ ಈಸ್ಟಿನ ಒಂದು ಜಮಾಅತ್, ಮತ್ತು ಬೆಲ್ಜಿಯಂ. ಸೇರ್ಪಡೆಗೊಂಡವರಲ್ಲಿ ವರ್ಧನೆಯ ಪ್ರಕಾರ ಪ್ರಮುಖ ಜಮಾಅತ್‌ಗಳು ಹೀಗಿವೆ: ಪಾಕಿಸ್ತಾನ, ನೈಜೀರಿಯಾ, ಕೇಮರೂನ್, ಸಿರಾಲಿಯೋನ್, ಗೇಂಬಿಯಾ, ಕೋಂಗೋ ಬರಾಝಾವೇಲ್.

ಭಾರತದ ಮೊದಲ ಹತ್ತು ರಾಜ್ಯಗಳು ಅನುಕ್ರಮವಾಗಿ ಹೀಗಿವೆ: ಕೇರಳ, ತಮಿಳುನಾಡು, ಜಮ್ಮು ಕಾಶ್ಮೀರ, ಕರ್ನಾಟಕ, ತೆಲಂಗಾನ, ಒಡಿಶ, ಪಂಜಾಬ್, ವೆಸ್ಟ್ ಬಂಗಾಳ, ಮಹಾರಾಷ್ಟ್ರ

ಮತ್ತು ಉತ್ತರ ಪ್ರದೇಶ. ಭಾರತದ ಮೊದಲ ಹತ್ತು ಜಮಾಅತುಗಳು ಅನುಕ್ರಮವಾಗಿ ಹೀಗಿವೆ: ಕೊಯಂಬತ್ತೂರ್, ಖಾದಿಯಾನ್, ಹೈದರಾಬಾದ್, ಕಾಲಿಕಟ್, ಮಂಜೇರಿ, ಬೆಂಗಳೂರು, ಮೇಲಪಾಳಯಂ, ಕೋಲ್ಕತ್ತ, ಕೇರಂಗ್ ಮತ್ತು ಕರುಳಾಯಿ.

(ಹುಝೂರ್ ಹೇಳಿದರು:) ಅಲ್ಲಾಹನು ಧನತ್ಯಾಗ ಮಾಡಿದವರ ಸಂಪತ್ತು ಮತ್ತು ಕುಟುಂಬದಲ್ಲಿ ಅಪಾರ ಅನುಗ್ರಹವನ್ನು ದಯಪಾಲಿಸಲಿ. (ಹೊಸ ವರ್ಷಕ್ಕೆ ಸಂಬಂಧಿಸಿ ದುಆಗಳನ್ನು ಮಾಡಲು ಮನವಿ ಮಾಡುತ್ತಾ ಹುಝೂರ್ ಹೀಗೆ ಹೇಳಿದರು:) 2025ನೇ ವರ್ಷ ಜಮಾಅತಿಗೆ ಅನುಗ್ರಹಗಳ ವರ್ಷವಾಗಲು ದುಆ ಮಾಡಿರಿ. ಅಲ್ಲಾಹನು ಜಮಾಅತನ್ನು ಎಲ್ಲ ಕೇಡುಕುಗಳಿಂದ ರಕ್ಷಿಸಲಿ. ಪಾಕಿಸ್ತಾನದಲ್ಲಿ ಉಗ್ರವಾದಿ ಗುಂಪುಗಳು ಎಲ್ಲ ವಿಧದ ಪೀಡನೆಗಳನ್ನು ಮಾಡಲು ಪ್ರಯತ್ನಿಸುತ್ತಾ ಇರುತ್ತವೆ. ಅಲ್ಲಾಹನು ಆ ದುಷ್ಟರನ್ನು ಬೇಗನೇ ಹಿಡಿಗೂಡಲಿ. ಅಹ್ಮದಿಯರನ್ನು ತನ್ನ ಸಂರಕ್ಷಣೆಯಲ್ಲಿ ಇರಿಸಲಿ. ರಬ್ವದ ಮೇಲೂ ಈ ಜನರ ವಿಶೇಷ ನೋಟ ಇರುತ್ತದೆ. ಅಲ್ಲಾಹನು ಅದನ್ನು ಕೂಡ ಸಂರಕ್ಷಿಸಲಿ. ದುರೂದ್ ಶರೀಫ್ ಮತ್ತು ಕೆಲವು ದುಆಗಳ ಕುರಿತು ನಾನು ಈಹಿಂದೆ ಗಮನ ಸೆಳೆದಿದ್ದೆ. ಅದೇ ರೀತಿಯಲ್ಲಿ ಪಾಕಿಸ್ತಾನ, ಬಾಂಗ್ಲಾದೇಶ, ಸಿರಿಯ, ಆಫ್ರಿಕದ ಇತರ ದೇಶಗಳಲ್ಲಿ ಮತ್ತು ಎಲ್ಲೆಡೆ ಅಲ್ಲಾಹನು ಅಹ್ಮದಿಯರನ್ನು ಸಂರಕ್ಷಿಸಲಿ. ಅದಕ್ಕಾಗಿ ವಿಶೇಷವಾಗಿ ಸ್ವತಃ ಬಹಳಷ್ಟು ದುಆ ಮಾಡುವುದು ಅಹ್ಮದಿಯರ ಕಡ್ಡಾಯ ಕರ್ತವ್ಯವಾಗಿದೆ. ತಮ್ಮ ದೇಶಗಳಿಗಾಗಿಯೂ ಲೋಕದ ಪ್ರಚಲಿತ ಸ್ಥಿತಿಗತಿಗಳಿಗಾಗಿಯೂ ಮತ್ತು ಯುದ್ಧದ ಅವಸ್ಥೆಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅದರ ದುಷ್ಪರಿಣಾಮಗಳಿಂದ ಎಲ್ಲ ಮುಗ್ಧರನ್ನು ಮತ್ತು ಪೀಡಿತರನ್ನು ರಕ್ಷಿಸಲಿ.

ಜನರು ಹೊಸವರ್ಷವನ್ನು ಆಚರಿಸುತ್ತಾರೆ. ಆದರೆ ಎಲ್ಲರೂ ತಮ್ಮ ಸಂತೋಷಗಳನ್ನು ಮಾತ್ರ ನೋಡುತ್ತಾರೆ. ಇತರರ ನೋವಿನ ಬಗ್ಗೆ ಅವರಿಗೆ ಚಿಂತೆಯಿಲ್ಲ. ಶಕ್ತಿಶಾಲಿ ಸಮುದಾಯಗಳು ಬಡ ಸಮುದಾಯಗಳ ಮತ್ತು ಪೀಡಿತ ಜನರ ಮೇಲೆ ದೌರ್ಜನ್ಯ ಮಾಡುತ್ತಾ ಹೋಗುತ್ತಿವೆ. ಅಲ್ಲಾಹನು ಈ ವರ್ಷದಲ್ಲಿ ಈ ಎಲ್ಲ ಶಕ್ತಿಶಾಲಿ ಸಮುದಾಯಗಳ ಯೋಜನೆಗಳನ್ನು ಮಣ್ಣುಪಾಲು ಮಾಡಲಿ. ಅಲ್ಲಾಹನ ಏಕತ್ವ ಲೋಕದಲ್ಲಿ ಸ್ಥಾಪನೆಗೊಳ್ಳುವುದನ್ನು ನಾವು ನೋಡುವಂತಾಗಲಿ. ಅಲ್ಲಾಹನು ನಮಗೂ ಅದರ ಸೌಭಾಗ್ಯ ನೀಡಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

At, ***'Masjid Mubarak'***, *Islamabad*, *Tilford*, U.K. On 03-01-2025

**Summarized by** *Majlis Ansarullah Bharat*

***Kannada Translation***: Moulavi Inamullah for Kannada Desk, Qadian

***Reviewed by***: M.P Ibrahim | ***Layout***: Basheer K.P. Manjeshwar

***Published By***: Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon